ಅ) ಹೌದು. ಸಜನಪಡು ಗ್ರಾಮದ ಕಂಚಿನಡ್ಕಪದವು ಎಂಬಲ್ಲಿ ಸರ್ವೆ ನಂ. 109/1ಪಿ1 ಮತ್ತು 110/1ಪಿ1ರಂತೆ ಒಟ್ಟು 8.55 ಎಕರೆ ಜಾಗವನ್ನು ಗುರುತಿಸಲಾಗಿದೆ.

ಆ) ಹೌದು.

ಇ) ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ ಮಾರ್ಗಸೂಚಿರನ್ವಯ ಸದರಿ ಜಾಗಕ್ಕೆ ಈಗಾಗಲೇ ಆವರಣ ಗೋಡೆಯನ್ನು ನಿರ್ಮಿಸಿ ಕೊಳವೆ ಬಾವಿಯನ್ನು ಕೊರೆಯಲಾಗಿದೆ. ವೈಜ್ಞಾನಿಕವಾಗಿ ಘನತ್ಯಾಜ್ಯ ವಸ್ತು ವಿಲೇವಾರಿಗಾಗಿ ಟೆಂಡರ್ ಕರೆಯಲಾಗಿದೆ. ಘನತ್ಯಾಜ್ಯವನ್ನು ಬೇರ್ಪಡಿಸಿ, ಎಚ್.ಡಿ.ಪಿ.ಇ. ಲೈನರ್‌ವುಳ್ಳ ಪಿಟ್‌ಗಳಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಲೀಚೆಟ್ ಸಂಗ್ರಹಣೆಗೆ ಲೀಚೆಟ್ ನಿರ್ಮಿಸಲು ಹಾಗೂ ಸದರಿ ನಿವೇಶನ ಸುತ್ತಲೂ ಗಿಡಗಳನ್ನು ನೆಡಲು ಕ್ರಮಕೈಗೊಳ್ಳಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳಾ ಕ್ರೀಡಾಂಗಣದ ಸಿಂಥೆಟಿಕ್ ಟ್ರ್ಯಾಕ್ ಕಾಮಗಾರಿ

130 (385) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಪ್ರವಾಸೋದ್ಯಮ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ ಕ್ರೀಡಾ ಚಟುವಟಿಕೆಗೆ ನಿರ್ಮಿಸುತ್ತಿರುವ ಸಿಂಥೆಟಿಕ್ ಟ್ರ್ಯಾಕ್‌ನ ಕಾಮಗಾರಿ ಯಾವ ಹಂತದಲ್ಲಿದೆ;

ಆ) ಈ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ ಸರ್ಕಾರ ಎಷ್ಟು ಹಣವನ್ನು ಮಂಜೂರು ಮಾಡಿದೆ; ಇದುವರೆವಿಗೂ ವೆಚ್ಚ ಮಾಡಿರುವ ಹಣವೆಷ್ಟು; (ವಿವರ ನೀಡುವುದು)

ಇ) ಈ ಕಾಮಗಾರಿಯು ಪೂರ್ಣಗೊಳ್ಳಲು ಕಾಲಮಿತಿ ನಿಗದಿಗೊಳಿಸಲಾಗಿದೆಯೇ ;

ಈ) ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಕೃತಿಯ ಅಂಗವಾದ 'ಕಂಬಳ' ಕ್ರೀಡೆಗೆ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿದೆಯೇ;

ಉ) 'ಕಂಬಳ' ಕ್ರೀಡೆಯನ್ನು ಉತ್ತೇಜಿಸುವ ಉದ್ದೇಶ ಸರ್ಕಾರ ಹೊಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ರೂ. 3.09 ಕೋಟಿ ಅಂದಾಜು ವೆಚ್ಚದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಅಳವಡಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ, ಟೆಂಡರ್ ಕರೆಯಲಾಗಿದೆ.

ಆ) ರೂ. 1.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಇ) ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, 5 ತಿಂಗಳ ಅವಧಿ ಅಗತ್ಯವಿರುತ್ತದೆ.

ಈ) ಇಲ್ಲ.

ಉ) ಯಾವುದೇ ಕಾರ್ಯಕ್ರಮ ಇರುವುದಿಲ್ಲ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಿತಿ ಕೇಂದ್ರಗಳು

131 (175) ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಿತಿ ಕೇಂದ್ರಗಳು ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು); ಇದೊಂದು ಖಾಸಗಿ ಸಂಸ್ಥೆಯೇ ಅಥವಾ ಸರ್ಕಾರದ ಅಂಗ ಸಂಸ್ಥೆಯೇ;

ಆ) ಈ ಕೇಂದ್ರದ ನಿರ್ವಹಣೆಯನ್ನು ಯಾವ ಇಲಾಖೆ ನಡೆಸುತ್ತಿದೆ; (ಇದರ ಬೈಲಾ ನಕಲು ನೀಡುವುದು)

ಇ) ಪಿಡಬ್ಲ್ಯೂಡಿ, ಜಿಲ್ಲಾ ಪಂಚಾಯ್ತಿ ಇಂಜಿನಿಯರ್ ವಿಭಾಗಗಳು ಇದ್ದರೂ ಸರ್ಕಾರ ಈ ರೀತಿಯ ನಿರ್ಮಿತಿ ಕೇಂದ್ರವನ್ನು ಯಾವ ಕಾರಣಕ್ಕಾಗಿ ತೆರೆಯಲಾಗಿದೆ ; (ಪೂರ್ಣ ವಿವರ ನೀಡುವುದು)

ಈ) ನಿರ್ಮಿತಿ ಕೇಂದ್ರಕ್ಕೆ ಟೆಂಡರ್ ಕರೆಯದೆ ಕಮೀಷನ್ ಆಧಾರದಲ್ಲಿ ಕಾಮಗಾರಿಗಳನ್ನು ನೀಡಲು ಕಾರಣವೇನು ; (ವಿವರ ನೀಡುವುದು)

ಉ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರಕ್ಕೆ ಯಾವ ಯಾವ ಕಾಮಗಾರಿಗಳನ್ನು ನೀಡಲಾಗಿದೆ; (ವಾರ್ಷಿಕವಾರು ಪೂರ್ಣ ವಿವರ ನೀಡುವುದು)

ಊ) ಕಳೆದ 3 ವರ್ಷಗಳಿಂದ ನಿರ್ಮಿಸಿದ ಕಾಮಗಾರಿಗಳಿಂದ ಪಡೆದ ಕಮೀಷನ್ ಎಷ್ಟು ಯಾವ ಖಾತೆಗೆ ಜಮಾ ಮಾಡಲಾಗುತ್ತಿದೆ; ಯಾವ ಯಾವ ಬಾಬ್ತುಗಳಿಗೆ ಈ ಕಮೀಷನ್ ವೆಚ್ಚ ಮಾಡಲಾಗಿದೆ; (ಆಯವ್ಯಯಗಳ ವಿವರ ನೀಡುವುದು)